ಸರ್ಕಾರಿ ಪದವಿ ಕಾಲೇಜುಗಳ ಪ್ರಾರಂಭ

272 (312)

ಶ್ರೀ ಅಭಯ್ ಪಾಟೀಲ್

ಅ) ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ವಿವಿಧ ಮತಕ್ಷೇತ್ರಗಳಲ್ಲಿ ಹೊಸದಾಗಿ ಆರಂಭವಾಗುವ ಪದವಿಕಾಲೇಜುಗಳು (ಸರ್ಕಾರಿ/ಖಾಸಗಿ) ಯಾವುವು;

ಆ) ಬೆಳಗಾವಿ ಮತಕ್ಷೇತ್ರದಲ್ಲಿನ ಸರ್ಕಾರದ ಪದವಿ ಪೂರ್ವ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಾದರೆ, ಯಾವ ಸಾಲಿನಿಂದ ಆರಂಭಿಸಲಾಗುವುದು?

ಶ್ರೀ ಸಿ.ಟಿ.ರವಿ

(ಉನ್ನತ ಶಿಕ್ಷಣ ಸಚಿವರು)

ಅ) ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹೊಸದಾಗಿ 5-6 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳು ಪರಿಶೀಲನೆಯಲ್ಲಿರುತ್ತದೆ.

ಆ) ಇಲ್ಲ.

CBSE ಗೆ ಪರಿವರ್ತನೆ ಕೋರಿರುವ ಅರ್ಜಿಗಳು

297 (389)

ಶ್ರೀ ಯು.ಟಿ.ಖಾದರ್ (ಮಂಗಳೂರು)

ಅ) ರಾಜ್ಯ ಪಠ್ಯಕ್ರಮದಿಂದ ಸಿ.ಬಿ.ಎಸ್.ಇ.ಗೆ ಪರಿವರ್ತನೆ ಕೋರಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಎಷ್ಟು ಶಿಕ್ಷಣ ಸಂಸ್ಥೆಗಳು ನಿರಾಕ್ಷೇಪಣಾ ಪತ್ರ (ಎನ್.ಓ.ಸಿ) ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. (ವಿವರ ಒದಗಿಸುವುದು).

ಆ) ಈ ಪೈಕಿ ಎಷ್ಟು ಶಿಕ್ಷಣ ಸಂಸ್ಥೆಗಳಿಗೆ ನಿರಾಕ್ಷೇಪಣಾ ಪತ್ರ (ಎನ್.ಓ.ಸಿ. ನೀಡಲಾಗಿದೆ) (ಕ್ಷೇತ್ರವಾರು ವಿವರ ಒದಗಿಸುವುದು.)

ಶ್ರೀ ವಿಶ್ವೇಶ್ವರಯ್ಯ ಹೆಗೆಡ ಕಾಗೇರಿ

(ಮಾನ್ಯ ಪ್ರಾಥಮಿಕ ಮತು ಪ್ರೌಢ ಶಿಕ್ಷಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಿಂದ ಒಟ್ಟು 25 ಶಿಕ್ಷಣ ಸಂಸ್ಥೆಗಳು ನಿರಾಕ್ಷೇಪಣಾ ಪತ್ರ (ಎನ್.ಓ.ಸಿ.) ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಕ್ರಮ ಸಂಖ್ಯೆ	ವಲಯ	ಎನ್.ಓ.ಸಿ.ಗಾಗಿ ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಸಂಖ್ಯೆ
1	ಮಂಗಳೂರು ಉತ್ತರ	06
2	ಮಂಗಳೂರು ದಕ್ಷಿಣ	09
3	ಬಂಟ್ವಾಳ	03
4	ಪುತ್ತೂರು	01
5	ಬೆಳ್ತಂಗಡಿ	02
6	ಮೂಡಬಿದ್ರೆ	02
7	ಸುಳ್ಯ	02
	ಒಟ್ಟು	25

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ 23 ಶಿಕ್ಷಣ ಸಂಸ್ಥೆಗಳಿಗೆ ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ.

ಕ್ರಮ ಸಂಖೆ	ವಲಯ	ಎನ್.ಓ.ಸಿ.ನೀಡಿರುವ ಸಂಸ್ಥೆಗಳ ಸಂಖ್ಯೆ
1	ಮಂಗಳೂರು ಉತ್ತರ	05
2	ಮಂಗಳೂರು ದಕ್ಷಿಣ	09
3	ಬಂಟ್ವಾಳ	03
4	ಪುತ್ತೂರು	00
5	ಬೆಳ್ತಂಗಡಿ	02
6	ಮೂಡಬಿದ್ರೆ	02
7	ಸುಳ್ಯ	02
	ಒಟ್ಟು	23

ಹೊಸದುರ್ಗ ನಗರದಲ್ಲಿ ಸರ್ಕಾರದವಗಿಂದ ಡಿಪ್ಲೋಮಾ ಕಾಲೇಜಿನ ಮಂಜೂರಾತಿ

289 (305)

ಶ್ರೀ ಗೂಳಿಹಟ್ಟಿ ಡಿ.ಶೇಖರ್

ಅ) ಹೊಸದುರ್ಗ ತಾಲ್ಲೂಕಿನ ಹೊಸದುರ್ಗ ನಗರದ ಯಾವ ಸರ್ವೆ ನಂಬರಿನ ಸರ್ಕಾರದ ಜಾಗದಲ್ಲಿ ಸರ್ಕಾರದ ಡಿಪ್ಲೋಮಾ ಕಾಲೇಜು ಪ್ರಾರಂಭಿಸಲು ಒಪ್ಪಿಗೆ ನೀಡಿದೆ; ಜಮೀನು ಮಂಜೂರಾತಿ ನೀಡುವಲ್ಲಿ ವಿಳಂಬವಾಗಲು ಕಾರಣವೇನು; ಎಷ್ಟು ಅವಧಿಯೊಳಗಾಗಿ ಜಮೀನು ಮಂಜೂರಾತಿ ಮಾಡಲಾಗುವುದು?